ಅಥಣಿಗೆ ಸಂಬಂಧಪಟ್ಟಂತೆ, ಸಾಮಾನ್ಯ ಮಳೆ ಪ್ರಮಾಣ ೫೮೭.೯ ಮಿ. ಮೀ. ಆದರೆ ಕೊಟನಟ್ಟಕ್ಕೆ ಸಂಬಂಧಪಟ್ಟಂತೆ ಸಾಮಾನ್ಯ ಮಳೆ ಪ್ರಮಾಣ ಪ್ರಾಪ್ತಿತಿ ದೊರಕುತ್ತಿಲ್ಲ.

ಆ) ಅಥಣಿ ತಾಲ್ಲೂಕಿನಲ್ಲಿ ವಾರ್ಷಿಕ ಸಾಮಾನ್ಯ ವ್ಯವಸಾಯಕ್ಕೆ ಉಪಯೋಗಿತವಾದ ವಂತಂ ಜಮೀನಿನ ಪ್ರಮಾಣ ೧.೭೮, ೩೧೪ ಹೆಕ್ಟೇರುಗಳು. ಅದರಲ್ಲಿ

ಇ) ೧೯೮೨-೮೩, ೧೯೮೩-೮೪, ೧೯೮೪-೮೫ ಮತ್ತು ೧೯೮೫-೮೬ರಲ್ಲಿ ಬಿತ್ತನೆಯಾದ ವಿಸ್ತೀರ್ಣ ಕೆಳಕಂಡಂತಿದೆ,

ವರ್ಷ	ಮಳೆ ಅಭಾವದ ಕಾರಣ ಬಿತ್ತನೆ ಕೈಬಿಡಲಾದ ಹಳ್ಳಿಗಳ ಸಂಖ್ಯೆ (ಒಟ್ಟು ಹಳ್ಳಿಗಳು ೮೯)	ಬಿತ್ತನೆಯಾದ ಪ್ರದೇಶ ಹೆಕ್ಟೇರುಗಳಲ್ಲಿ
೧೯೮೨-೮೩	೩೫	೧,೬೫,೯೨೯
೧೯೮೩-೮೪	ಇಲ್ಲ	೧,೭೮,೧೨೦
೧೯೮೪-೮೫	೩೧	೧,೬೯ ೮೬೮
೧೯೮೫-೮೬ (ಜುಲೈವರೆಗೆ)	೩೧	೪೦,೫೧೭

ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವುದು

೯೯೯. ಶ್ರೀ ಎಂ. ಶಿವಣ್ಣ (ಹೆಗ್ಗಡ ದೇವನ ಕೋಟೆ).—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಜಿಲ್ಲೆಯಲ್ಲಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ ಎಷ್ಟು ?

ಆ) ಇವರಲ್ಲಿ ಹರಿಜನ ಗಿರಿಜನರಿಷ್ಟು ಹಾಗೂ ಒಟ್ಟು ಶಿಕ್ಷಕರಿಗೆ ಹೋಲಿಸಿದಲ್ಲಿ ಇವರ ಶೇಕಡಾವಾರು ಪ್ರಮಾಣವೆಷ್ಟು ?

ಇ) ಶೇಕಡಾವಾರು ಪ್ರಮಾಣ ಕಡಿಮೆ ಇರುವ ಸಂದರ್ಭಗಳಲ್ಲಿ ಸದರಿ ಪ್ರಮಾಣವನ್ನು ಪೂರೈಸಲು ಸರ್ಕಾರದವರು ಕೈಕೊಳ್ಳುವ ಕ್ರಮವೇನು ?

ಈ) ಹಾಲಿ ಎಷ್ಟು ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇವೆ ಹಾಗೂ ಅವುಗಳನ್ನು ಯಾವಾಗ ಭರ್ತಿ ಮಾಡಲಾಗುವುದು ?

ಉ) ಭರ್ತಿ ಮಾಡುವಾಗ ಕಾಂಟ್ರಾಕ್ಟ್ ಆಧಾರದ ಮೇಲೆ ಹಿಂದೆ ಸೇವೆ ಸಲ್ಲಿಸಿರುವ ಉಪಾಧ್ಯಾಯರಿಗೆ ಅವಕಾಶ ನೀಡಲಾಗುವುದೇ ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ) ೬೮೭೬.

ಆ) ಹರಿಜನರು—೮೦೮/ ಶೇ. ೧೧.
ಗಿರಿಜನರು— ೭೫/ ಶೇ. ೦.೫.

ಇ) ಕೊರತೆಯನ್ನು ಸರಿದೂಗಿಸಲು ಮೀಸಲಾತಿ ಪ್ರಮಾಣವನ್ನು ಕ್ರಮವಾಗಿ ಪರಿಶಿಷ್ಟ ಜಾತಿಯವರಿಗೆ ಶೇ. ೧೫ ರಿಂದ ೨೦ಕ್ಕೂ ಪರಿಶಿಷ್ಟ ವರ್ಗದ ಜಾತಿಯವರಿಗೆ ಶೇ. ೩ ರಿಂದ ೫ಕ್ಕೂ ಏರಿಸಲಾಗಿದೆ.

ಈ) ೬೨. ಸೇವೆಯಿಂದ ಬಿಡುಗಡೆಯಾಗಿರುವ ಒಪ್ಪಂದದ ಆಧಾರದ ಮೇಲಿನ ಅಭ್ಯರ್ಥಿಗಳನ್ನು ವಯಸ್ಸು ಮತ್ತು ಮೆರಿಟ್ ಆಧಾರದ ಮೇಲೆ ನೇಮಕಾತಿ ಮಾಡಿ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಉ) ಪ್ರಶ್ನೆ (ಈ)ಗೆ ಕೊಟ್ಟ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.